ಮೆತ್ತಿಕೊಂಡು ಏದುತ್ತಾ ಬಿದ್ದಿರುತ್ತಿದ್ದರು. ಕಾಫಿ ಟೀ ತಂಬಾಕು ಮದ್ಯ ಡ್ರಗ್ಸ್ ಜೂಜು ವ್ಯಸನಿಗಳೆಲ್ಲ ಕಂಗೆಟ್ಟು ಹೋಗಿದ್ದರು.

ದೇವಲೋಕದಲ್ಲಿ ಭೂಲೋಕದಂತೆಯೇ ಅತ್ಯಾಧುನಿಕ ಯಂತ್ರಗಳಿದ್ದವು. ಆದರೂ ಸಾವಿರಾರು ಜನರ ನೂರಾರು ತಂಡಗಳು ನಿರಂತರವಾಗಿ ಬರುತ್ತಿದ್ದುದರಿಂದ ಹಲವಾರು ಮೈಲುಗಟ್ಟಲೆ ಸರತಿಯ ಸಾಲುಗಳು ಹಗಲು ರಾತ್ರಿಯೆನ್ನದೆ, ವಾರಗಟ್ಟಲೆ ಕಾಯುತ್ತಾ ನಿಂತಿರುತ್ತಿದ್ದವು. ಹೆದ್ದಾರಿಗಳ ಟೋಲ್‌ಗಳಂತೆ ಜನರ ದೇಹಗಳ ಸ್ಕ್ಯಾನ್ ಮಾಡಿ, ಅವರ ದೇಹದಲ್ಲಿ ಅಳವಡಿಸಲಾಗಿರುವ ಕೃತಕ ವಸ್ತುವನ್ನು ಪತ್ತೆ ಮಾಡಿ ಹೇಳಿಬಿಡುತ್ತಿದ್ದವು. ಒಬ್ಬನೂ ತಪ್ಪಿಸಿಕೊಳ್ಳಲಾಗುತ್ತಿರಲಿಲ್ಲ. ನೂರಕ್ಕೆ ತೊಂಬತ್ತೊಂಬತ್ತರಷ್ಟು ಜನ ಬೆರಕೆ ದೇಹದವರಾಗಿ ನಿರ್ಣಯಿಸಲ್ಪಡುತ್ತಿದ್ದರು. ಅವರಿಗೆ ಖಾಯಂ ಆಗಿ ಶೆಡ್ಡಿನ ನರಕವೇ ಗತಿಯೆಂಬುದರಲ್ಲಿ ಅನುಮಾನವೇ ಇರಲಿಲ್ಲ.

ಹೃದಯ ಸಂಬಂಧೀ ಎಡವಟ್ಟದ್ದವರು ಹಲವರಿದ್ದರು. ಹೃದಯದ ಕವಾಟಗಳ ಐಬಿದ್ದ ಕೆಲವರು ಕೃತಕ ಕವಾಟಗಳನ್ನು ಹಾಕಿಸಿಕೊಂಡಿದ್ದರು. ಮತ್ತೆ ಕೆಲವರ ಹೃದಯದ ರಕ್ತನಾಳಗಳು ನೆಣ, ಉಪ್ಪು, ರಾಸಾಯನಿಕಗಳ ದೆಸೆಯಿಂದ ಸಂಕುಚನಗೊಂಡವರು ಸ್ಟೆಂಟ್ ಹಾಕಿಸಿಕೊಂಡಿದ್ದರು. ಮತ್ತೆ ಕೆಲವರು ಪೇಸ್ ಮೇಕರ್‌ಗಳನ್ನು ಹಾಕಿಸಿಕೊಂಡಿದ್ದರು. ಮತ್ತಷ್ಟು ಜನ ಹುಟ್ಟಿನಿಂದ ಹೊತ್ತು ತಂದಿದ್ದ ಹೃದಯವನ್ನೇ ಬದಲಾಯಿಸಿಕೊಂಡು ಬೇರೆ ಹೃದಯ ಜೋಡಿಸಿಕೊಂಡಿದ್ದರು. ಮತ್ತಷ್ಟು ಜನ ಮೂತ್ರಪಿಂಡಗಳ ಬದಲಾಯಿಸಿಕೊಂಡಿದ್ದರು. ಕೆಲವರು ಬೈಲ್ ಡಕ್ಟ್ ಸ್ಟೆಂಟ್ ಹಾಕಿಸಿಕೊಂಡಿದ್ದರು. ಮತ್ತೆ ಕೆಲವರು ಕೃತಕ ಕಣ್ಣಿನ ಮಸೂರ ಹಾಕಿಸಿಕೊಂಡಿದ್ದರು.



ಇವರೆಲ್ಲರಿಗೆ ತುಂಬಿ ತುಳುಕುತ್ತಿದ್ದ ಶೆಡ್ಡೇ ಗತಿ ಎಂಬಂತಾಯಿತು.

ಒಬ್ಬ ಭೂಲೋಕದಲ್ಲಿ ಮಗುವಾಗಿದ್ದಾಗ ಆಟವಾಡುತ್ತಾ ಸಣ್ಣ ಪ್ಲಾಸ್ಟಿಕ್ಕಿನ ಗೋಲಿಯನ್ನು ನುಂಗಿಬಿಟ್ಟಿದ್ದ. ಆ ಹಾಳಾದ ಗೋಲಿ ಅವನ ಜೀವನಪರ್ಯಂತ ಆಚೆ ಬಾರದೆ ಜೀರ್ಣಾಂಗವ್ಯೂಹದಲ್ಲೆಲ್ಲೋ ಒಂದು ಕಡೆ ಬೀಡು ಬಿಟ್ಟಿತ್ತು. ಸಾಯೋತನಕ ತೊಂದರೆ ಕೊಡದ ಗೋಲಿಯ ಶನಿಕಾಟ ದೇವಲೋಕದಲ್ಲಿ ಕಾಣಿಸಿಕೊಂಡಿತು. ಅದೊಂದು ಬಿಟ್ಟರೆ ಅವನ ದೇಹವು ಪರಿಶುದ್ಧವಾಗಿತ್ತು. ಶೆಡ್ಡಿನಿಂದ ಬಿಡುಗಡೆ ಹೊಂದಲು ಗೋಲಿ ಆಚೆ ಬಂದರೆ ಸಾಕಿತ್ತು. ಅದನ್ನು ಹೊರದೂಡಲು ಅವನು ಕಲ್ಲು ಮಣ್ಣು ಮುಂತಾಗಿ ಕಣ್ಣಿಗೆ ಬಿದ್ದದ್ದನ್ನೆಲ್ಲ ತಿಂದು ಭೇದಿ ಹತ್ತಿಸಿಕೊಂಡು ರೊಚ್ಚಿಗೆದ್ದು ತಿಣುಕಿದರೂ ಗೋಲಿ ಹೊರಬಾರದೆ ನಿತ್ರಾಣಗೊಂಡು ಸಾಯುವಂತಾಗಿದ್ದ. ಆದರೆ ದೇವಲೋಕದಲ್ಲಿ ಸಾವೆಂಬುದು ಇರಲಿಲ್ಲ. ಏನಾದರೂ ಬದುಕಿಯೇ ಕಷ್ಟಗಳ ನೀಗಬೇಕಾಗಿತ್ತು. ಆತ್ಮಹತ್ಯೆ ಮಾಡಿಕೊಂಡರೂ ಜೀವ ದೇಹ ಬಿಟ್ಟು ಕದಲುತ್ತಿರಲಿಲ್ಲ.

ಹತ್ತಾರು ಸಲ ರಣರಂಗದಲ್ಲಿ ಕಾದಾಡಿದ್ದ ಯೋಧನೊಬ್ಬನಿಗೆ ಯಾವುದೋ ಯುದ್ಧದಲ್ಲಿ ಎಲ್ಲಿಂದಲೋ ಹಾರಿ ಬಂದ ಗುಂಡಿನ ತುಂಡೊಂದು ಅವನ ಬಲಗೈ ಮಣಿಕಟ್ಟಿನ ಚರ್ಮದ ಕೆಳಗೆ ಹೊಕ್ಕು ನೆಲೆಗೊಂಡಿತ್ತು. ಸಾಯುವ ತನಕ ನಿರುಪದ್ರವಿ ಆಗಿದ್ದ ಗುಂಡಿನ ತುಂಡು ಯೋಧನಿಗೆ ಶೆಡ್ಡಿನಲ್ಲಿ ಕಷ್ಟಪರಂಪರೆಯನ್ನೇ ಸೃಷ್ಟಿಸಿತ್ತು. ಮಣಿಕಟ್ಟಿನ ಭಾಗದಲ್ಲಿ ಹೆಚ್ಚಿನ ನರ ಮತ್ತು ರಕ್ತನಾಳಗಳಿದ್ದುದರಿಂದ ಗುಂಡಿನ ತುಂಡನ್ನು ಕೊಯ್ದು ಹೊರತೆಗೆಯುವಂತಿರಲ್ಲ.